ಘಾಟಿದೆ.

◆ **ಲೇಖಕರು ಒಂದು ಘಟ್ಟದಲ್ಲಿ ಒಳ್ಳೆಯ ಗದ್ಯ ಬರೆದು, ಇನ್ನೊಂದು ಘಟ್ಟದಲ್ಲಿ ಕೆಟ್ಟ ಗದ್ಯ ಬರಿಯೋ ಸಾಧ್ಯತೆಯಿದೆ. ಅನಂತಮೂರ್ತಿಯವರ 'ಸಂಸ್ಕಾರ' – 'ಭವ', ಭೈರಪ್ಪನವರ 'ಗೃಹಭಂಗ' – 'ಆವರಣ' ನೆನಪಾಗ್ತಿವೆ.**

ನನಗೊತ್ತಿಲ್ಲ. ಇದಕ್ಕೆ ಐಡಿಯಾಲಜಿ ಕಾರಣ ಇರಬಹುದು. ಹಾಗೆ ನೋಡಿದ್ರೆ ತ್ರಾಸು ಕೊಡದೆ ಸುಲಲಿತವಾಗಿ ಓದಿಸ್ಕೊಳ್ಳೋ ಆದರೆ ನಾನು ಇಷ್ಟಪಡದಿರೋ ಗದ್ಯಲೇಖಕರು ಇದಾರೆ. ಅವರಲ್ಲಿ ಕೆಲವರು ಬಲಪಂಥೀಯ ಪತ್ರಕರ್ತರು. ಅವರ ಗದ್ಯದ ತರ್ಕಕ್ಕೆ ಒಂದು ಕ್ಷಣ ನಿಮ್ಮನ್ನು ಒಲಿಸಿಕೊಳ್ಳೋ ಗುಣವಿದೆ. ಅವರ ಪಾಪ್ಯುಲಾರಿಟಿ ಬರವಣಿಗೆಯ ತೀಕ್ಷ್ಣತೆಯಿಂದಲೇ ಬಂದಿದ್ದು. ಆದರೆ ಒಳ್ಳೆಯ ಗದ್ಯದಲ್ಲೂ ಕೆಟ್ಟ ವಿಚಾರ ಬರಿಯೋಕೆ ಸಾಧ್ಯವಿದೆ. ಒಳ್ಳೆಯ ಗದ್ಯ ಒಳ್ಳೆಯ ವಿಚಾರ ಒಂದು ಐಡಿಯಲ್ ಕಾಂಬಿನೇಶನ್.

◆ **ಹೊಸತಲೆಮಾರಲ್ಲಿ ಯಾರ ಗದ್ಯ ಇಷ್ಟವಾಗಿದೆ?**

ಕೆಲವರ ಗದ್ಯ ಓದ್ತೀನಿ. ಸೊಗಸಾಗಿದೆ. ಆದರೆ ಅವರಲ್ಲಿ ಕೆಲವರು ಬರವಣಿಗೆಗೋಸ್ಕರ ಬರೀತಿದಾರೆ ಅಂತ ಅನಿಸುತ್ತದೆ. ಒಂಥರ ಕ್ಯಾಲ್ಕುಲೇಶನ್ ಇದೆ ಅವರಲ್ಲಿ. ವೆರಿ ಸಬ್‌ಕಾನ್ಶಿಯಸ್ ರೈಟಿಂಗ್. ಸಹಜವಾಗಿ ಬರೆದಂಥದ್ದಲ್ಲ. ತಡೆಯಲಾರದ ಸಿಟ್ನಲ್ಲೊ ಪ್ಯಾಶನ್‌ನಲ್ಲೊ ಬರೆದ ಹಾಗಲ್ಲ. ಕಂಟ್ರೈವ್ಡ್. ವರ್ಕ್‌ಡ್‌ಔಟ್. ಹಾಗೆ ಕವಿಯ ಗದ್ಯ ಅಂತ ನಾನು ಎಂಜಾಯ್ ಮಾಡಿರೋದು ಪುತಿನರ ಲಲಿತ ಪ್ರಬಂಧಗಳ ಗದ್ಯ.

'ಈಚಲು ಮರದ ಕೆಳಗೆ' ಬಹಳ ಒಳ್ಳೆಯ ಗದ್ಯ. ಎಲ್ಲರೂ ಒಪ್ಪಿಕೊಳ್ಳತಾರೊ ಇಲ್ಲವೋ ಗೊತ್ತಿಲ್ಲ, ನನ್ನ ಪ್ರಕಾರ ಬೀಚಿ ಕೂಡ ಒಬ್ಬರು. ಜೀವನದಲ್ಲಿ ವಿಕಾರವಾದದನ್ನು ಅತಿಮಾಡಿ ಹೇಳಿ, ನಿಜಗೊಳಿಸುವ ಗುಣ ಅವರ ಕಾದಂಬರಿಗಳಲ್ಲಿದೆ. ಒಬ್ಬನ ದುರಾಸೆಯನ್ನು ಮನುಷ್ಯನ ಬೇರೆಬೇರೆ ಪ್ರವೃತ್ತಿಗಳನ್ನ ಕಾದಂಬರಿಯ ಚೌಕಟ್ಟಿನಲ್ಲಿ ಅತಿಶಯೋಕ್ತಿಯಲ್ಲಿ ವರ್ಣಿಸಿ ನಿಜಗೊಳಿಸುವ ಟ್ರಿಕ್ ಅಥವಾ ಲಿಟರರಿ ಡಿವೈಜನ್ನ ಅವರು ಚೆನ್ನಾಗಿ ಮಾಡ್ತಾರೆ. ನನ್ನ ಪ್ರಕಾರ, ಅವರೊಬ್ಬ ಅವಜ್ಞೆಗೊಳಗಾದ

◆ **ಸಾಮಾನ್ಯವಾಗಿ ವಿನೋದ ಪ್ರಜ್ಞೆಯುಳ್ಳ ಲೇಖಕರ ಗದ್ಯ ಚೆನ್ನಾಗಿರುತ್ತದೆ. ತೇಜಸ್ವಿ ಅಥವಾ ದೇವನೂರ.**

ದೇವನೂರ ಒಳ್ಳೆಯ ಗದ್ಯಬರಹಗಾರ. ಅವರು ಹೆಚ್ಚು ಬರೆಯೋದಿಲ್ಲ ಅನ್ನೋದೇ ತಕರಾರು. ನನ್ನ ಪ್ರಕಾರ ಕುವೆಂಪು ಗದ್ಯ ಸೊಗಸಾದ ಗದ್ಯ. 'ನೆನಪಿನ ದೋಣಿಯಲ್ಲಿ' ಎಷ್ಟೊಳ್ಳೆಯ ಗದ್ಯ ಇದೆ. ಅದರಲ್ಲಿ ಅವರು ಮೈಸೂರಿನಲ್ಲಿ ಕಳೆದ ವಿದ್ಯಾರ್ಥಿ ಜೀವನದ ನೆನಪುಗಳನ್ನು ಬರೀತಾರೆ. ಒಂದು ಪಾಯಿಖಾನೆಯ ಚಿತ್ರಣವಂತೂ ಬೀಭತ್ಸವಾಗಿದೆ. 30–40 ವರ್ಷಗಳ ಹಿಂದೆ ಅದು ನಮ್ಮ ಬಾಲ್ಯಜೀವನದ ಅನುಭವವೇ. ಮಲವನ್ನು ಸಂಗ್ರಹಿಸಿ ಹೊತ್ಕೊಂಡು ಹೋಗೋರು. ನಾನು ಉಡುಪಿಯಲ್ಲಿ ನೋಡಿದೇನೆ. ನಾವು 40–50 ವರ್ಷಗಳ ಹಿಂದಿನ ಚರಿತ್ರೆಯನ್ನು ಮರೀತೇವೆ. ಸಾವಿರಾರು ವರ್ಷಗಳ ಹಿಂದಿನ ಚರಿತ್ರೆಯನ್ನು ಮರೆಯೋಲ್ಲ. ಈ ಚರಿತ್ರೆಯನ್ನು ಮೊಟ್ಟಮೊದಲು ಬದಲಾಯಿಸಿದ್ದು ಬಸವಲಿಂಗಪ್ಪ. ಇವತ್ತು ಬಸವಲಿಂಗಪ್ಪ ಅವರ ಬಗ್ಗೆ ಯಾರೂ ಮಾತಾಡಲ್ಲ. ಎಲ್ಲ ಅಯೋಧ್ಯೆಯ ರಾಮನ ಬಗ್ಗೆ ಮಾತಾಡ್ತಾರೆ.